# ಸ್ವಾಮಿ ಸುಬೋಧಾನಂದರ ಉಪದೇಶಗಳು

ಶ್ರೀರಾಮಕೃಷ್ಣ ಪರಮಹಂಸರ ಅಂತರಂಗ ಶಿಷ್ಯರಲ್ಲಿ ಅತ್ಯಂತ ಕಿರಿಯರಾದ ಸ್ವಾಮಿ ಸುಬೋಧಾನಂದರು (೧೮೬೭-೧೯೩೨) ಉಳಿದ ಸಹೋದರ ಸಂನ್ಯಾಸಿಗಳಿಂದ 'ಖೋಕಾ' (ಅಂದರೆ ಮಗು ಎಂದರ್ಥ) ಎಂದು ಪ್ರೀತಿಯಿಂದ ಕರೆಯಲ್ಪಡುತ್ತಿದ್ದರು. ಅವರ ಜಯಂತಿಯನ್ನು ನವೆಂಬರ್ 4 ರಂದು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ ಉಪದೇಶಗಳನ್ನು ಸಂಗ್ರಹಿಸಿ ನೀಡುತ್ತಿದ್ದೇವೆ.



P ಸಂನ್ಯಾಸವೆಂದರೆ ಸ್ವಾರ್ಥದ ಎಲ್ಲ ಉದ್ದೇಶಗಳನ್ನೂ, ಆಸೆಗಳನ್ನೂ ತ್ಯಾಗಮಾಡುವುದು. ಸಂನ್ಯಾಸವೆಂದರೇನೆಂದು ಹೇಳುವುದಕ್ಕೆ ಮುಂಚೆ ಬ್ರಹ್ಮಚರ್ಯದ ಬಗ್ಗೆ ಹೇಳಬೇಕು; ಬ್ರಹ್ಮಚರ್ಯ ಸಿದ್ಧಿಸದೆ ಸಂನ್ಯಾಸವಾಗಲಿ ತ್ಯಾಗವಾಗಲಿ ಸಾಧ್ಯವಿಲ್ಲ. ಬ್ರಹ್ಮಚರ್ಯ ಪಾಲನೆಗೆ ನಮ್ಮ ಆಹಾರ, ಅಭ್ಯಾಸಗಳು ಹಾಗೂ ಯೋಚನೆಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಿಕೊಳ್ಳಬೇಕಾಗುತ್ತದೆ.

P ಸಂನ್ಯಾಸಾಶ್ರಮದಲ್ಲಿ ಇರುವವರಿಗೆ ಶಾಸ್ತ್ರಗಳು ವಿಧಿಸುವ ನಿಯಮಗಳ ಪೈಕಿ ಲೈಂಗಿಕತೆಯ ನಿಯಂತ್ರಣಕ್ಕೆ ತುಂಬ ಪ್ರಾಮುಖ್ಯತೆ ಕೊಡಲಾಗಿದೆ. ಈ ಪಾಶವೀಯ ಭಾವವನ್ನು ನೇರವಾಗಿ ಅಥವಾ ಸುತ್ತಿ ಬಳಸಿ ಎಚ್ಚರಗೊಳಿಸುವ ಯಾವುದನ್ನೂ ಬ್ರಹ್ಮಚಾರಿಯು ಮಾಡಬಾರದು, ಗ್ರಹಿಸಬಾರದು. ಹೀಗೆ ಮನಸ್ಸನ್ನು ತನ್ನ ಸಂಪೂರ್ಣ ನಿಯಂತ್ರಣಕ್ಕೆ ತಂದುಕೊಳ್ಳಬೇಕು.

P ಯಾರು ತಾನು ಇಂದ್ರಿಯ-ಮನಸ್ಸುಗಳ ಸೇವಕನಾಗದೆ, ಅವುಗಳನ್ನೇ ತನ್ನ ಸೇವಕರನ್ನಾಗಿಸಿಕೊಳ್ಳುವನೋ ಅವನೇ ನಿಜವಾದ ಬ್ರಹ್ಮಚಾರಿ. ಲೋಕದ ಎಲ್ಲ ಧರ್ಮಗಳೂ ಈ ಬ್ರಹ್ಮಚರ್ಯ ಹಾಗೂ ಸಂನ್ಯಾಸವನ್ನು ಬೋಧಿಸುತ್ತವೆ; ಇವುಗಳ ಧ್ಯೇಯ ಒಂದೇ-ಮನಸ್ಸನ್ನು ಇಂದ್ರಿಯವಿಚಾರಗಳಿಂದ ಮೇಲೆತ್ತಿ ಭಗವಂತನೆಡೆಗೆ ಹರಿಯಬಿಡುವುದು. ಮನಸ್ಸು ಭಗವಂತನಲ್ಲಿ ನೆಲೆಗೊಂಡಿತೆಂದರೆ ದಿವ್ಯಾನಂದವನ್ನು ಅನುಭವಿಸತೊಡಗುವುದು.

P ದಾರವನ್ನು ಸೂಜಿಯ ಮೂಲಕ ಪೋಣಿಸಬೇಕಾದರೆ, ಅದರ ತುದಿಯ ಎಳೆಗಳೆಲ್ಲವನ್ನೂ ಚೂಪಾಗಿ ಒಂದುಗೂಡಿಸಿರಬೇಕು; ಹಾಗಿದ್ದರೆ ಮಾತ್ರವೇ ಅದು ಸೂಜಿಯ ಕಣ್ಣಿನೊಳಗೆ ಹೋಗುವುದು. ಇಲ್ಲವಾದರೆ, ಎಳೆಗಳು ವಿಭಿನ್ನ ದಿಕ್ಕಿಗೆ ಚಾಚಿಕೊಂಡಿದ್ದರೆ, ದಾರವನ್ನು ಸೂಜಿಯ ಮೂಲಕ ಪೋಣಿಸಲು ಸಾಧ್ಯವಾಗುವುದಿಲ್ಲ; ಅಂತೆಯೇ ನಮ್ಮ ಮನಸ್ಸನ್ನು ಭಗವಂತನೆಡೆಗೆ ಕೊಂಡೊಯ್ಯಬೇಕೆಂದಿದ್ದರೆ, ನಾವು ಅದನ್ನು ಬಾಹ್ಯವಸ್ತುಗಳಿಂದ ಹಿಂದಿರುಗಿಸಿಕೊಂಡು ಒಂದೇ ಬಿಂದುವಿನ ಮೇಲೆ ಏಕಾಗ್ರಗೊಳಿಸಬೇಕು ಎಂದು ನನ್ನ ಗುರುಗಳು ಹೇಳುತ್ತಿದ್ದರು.

P ಮಳೆಯ ನೀರು ಎತ್ತರದ ಪ್ರದೇಶಗಳಲ್ಲಿ ನಿಲ್ಲಲಾರದೆ ಹೇಗೆ ಕೆಳಗಿಳಿದು ಬರುತ್ತದೆಯೋ, ಹಾಗೆಯೇ ಪೊಳ್ಳುತನ ತುಂಬಿಕೊಂಡಿರುವವರಲ್ಲಿ ನಂಬಿಕೆ ನಿಲ್ಲುವುದಿಲ್ಲ ; ಅದು ಯಾವಾಗಲೂ ವಿನೀತರ, ದೀನರ ಹೃದಯಗಳನ್ನೇ ಅರಸುತ್ತಿರುತ್ತದೆ ಎಂದು ನನ್ನ ಗುರುಗಳು ಹೇಳುತ್ತಿದ್ದರು.

P ಎಲ್ಲಿಯವರೆಗೆ ವ್ಯಕ್ತಿಗಳ, ಮತಪಂಥಗಳ ನಡುವೆ ಜಗಳವಿರುತ್ತದೆಯೋ, ಅಲ್ಲಿಯವರೆಗೆ ಅವರು ಅತ್ಯುನ್ನತ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವಷ್ಟು ಮೇಲೇರಲಾರರು. ಸತ್ಯವು ಪ್ರಕಾಶಿಸಿದಾಗ ಅದು ಅಜ್ಞಾನದ ಕತ್ತಲೆಯನ್ನು ತೊಡೆದುಹಾಕುತ್ತದೆ. ಅದರೊಂದಿಗೆ ಈ ಭೂಮಿಯನ್ನು ಕಗ್ಗೊಲೆಗಳಿಂದ ರಕ್ತಸಿಕ್ತಗೊಳಿಸುವ ಸಂಕುಚಿತತೆ, ಮತಾಂಧತೆಗಳೂ ನಾಶವಾಗುತ್ತವೆ.

P ಅಜ್ಞಾನದ ತಿಮಿರದಲ್ಲಿರುವ ಜನರು ಮಾತ್ರ 'ನನ್ನ ದೇವರೊಬ್ಬನೇ ನಿಜವಾದ ದೇವರು, ನಿನ್ನ ದೇವರು ಸುಳ್ಳು' ಎಂದು ಹೇಳುತ್ತಾರೆ. ದೇವರನ್ನು ಸಾಕ್ಷಾತ್ಕರಿಸಿಕೊಂಡಿರುವವನು ಜಗಳವಾಡಲಾರ. ಆದರೆ ದೇವರಿಂದ ದೂರವಾಗಿರುವವನು ಜಗಳಕ್ಕೆ ಆಸ್ಪದ ಕೊಡುತ್ತಾನೆ; ಅದಕ್ಕೆ ಅನೇಕ ಸಂದರ್ಭಗಳು ಇರುತ್ತವೆ. ಆದರೆ ಸಾರ್ವತ್ರಿಕ ಸಾಮರಸ್ಯ ಇರುವುದು ನಮ್ಮ ಒಳಗೂ ಹೊರಗೂ ಇರುವ ಭಗವಂತನಲ್ಲಿ; ಭಗವತ್ಸಾಕ್ಷಾತ್ಕಾರವಾದ ನಂತರ ಎಲ್ಲ ರೀತಿಯ ಅಭಿಪ್ರಾಯ ಭೇದಗಳೂ ಕೊನೆಗೊಳ್ಳುತ್ತವೆ.

P ಯಾರಿಂದಲಾದರೂ ಒಳ್ಳೆಯ ವಿಷಯಗಳನ್ನು ಕೇಳಿ ತಿಳಿದುಕೊಳ್ಳಬಹುದು. ಅಮೂಲ್ಯ ರತ್ನವನ್ನು ಕೆಸರಿನಿಂದಲೂ ಸಂಗ್ರಹಿಸಬಹುದು. ಅಂತೆಯೇ ದೇವರಿಗೆ ಸಂಬಂಧಪಟ್ಟ ವಿಷಯವನ್ನು ಎಂಥವನಿಂದಲೂ ಕೇಳಿ ತಿಳಿಯಬಹುದು.


*(ಸಂಗ್ರಹ : ದೇವರೊಡನೆ ಬಾಳಿದವರು ಭಾಗ ೧ ಮತ್ತು 'What the Disciples Said About it' ಗ್ರಂಥಗಳಿಂದ)* *

# ನೆನಪಿನಂಗಳದಲ್ಲಿ
# ಮೂವರು ಶ್ರೇಷ್ಠ ಸಂನ್ಯಾಸಿಗಳು

ಸ್ವಾಮಿ ಶ್ರೀಧರಾನಂದ
ಅನು: ಸ್ವಾಮಿ ಜ್ಞಾನಯೋಗಾನಂದ

## ಭಾಗ-3

ಸ್ವಾಮಿ ಜಗದಾನಂದರು ಸ್ಥಿತಪ್ರಜ್ಞರೂ ಬ್ರಹ್ಮಜ್ಞಾನಿಗಳೂ ಆದ ಮಹಾಪುರುಷರಾಗಿದ್ದರು. ಅವರು ಶ್ರೀಮಾತೆಯವರ ಬಳಿಗೆ ಹೋಗಿದ್ದಾಗ ಶ್ರೀಮಾತೆ ಅವರನ್ನು ನೋಡಿ, 'ಓ ಅವನು ಋಷಿಯಾಗಿದ್ದ; ಶ್ರೀರಾಮಕೃಷ್ಣರ ಸೇವೆ ಮಾಡುವುದಕ್ಕಾಗಿ ಈಗ ಮತ್ತೆ ಋಷಿಯಾಗಿ ಬಂದಿದ್ದಾನೆ' ಎಂದಿದ್ದರು. ಸ್ವಾಮಿ ಜಗದಾನಂದಜಿಯವರನ್ನು ಕುರಿತು ಶ್ರೀಮಾತೆಯವರ ಅಭಿಪ್ರಾಯ ಹೀಗಿತ್ತು. ಸ್ವಾಮಿ ವಿರಜಾನಂದಜಿ ಯವರ ದೇಹತ್ಯಾಗವಾದ ನಂತರ, ನಮ್ಮಲ್ಲಿ ಕೆಲವರನ್ನು ಬೇಲೂರು ಮಠದಿಂದ ಜಗದಾನಂದಜಿಯವರ ಬಳಿಗೆ ಉಪನಿಷತ್ತುಗಳನ್ನು ಕಲಿಯಲು ಕಳುಹಿಸಿಕೊಟ್ಟಿದ್ದರು. ಆಗ ಜಗದಾನಂದಜಿಯವರು ಆಲ್ಮೋರಾದಲ್ಲಿದ್ದರು. ಶಾಸ್ತ್ರ ಓದುತ್ತ, ನಾವು ಅವರ ಮುಂದೆ ಪ್ರಶ್ನೆಯ ನಂತರ ಪ್ರಶ್ನೆ ಕೇಳಿ ಅವರನ್ನು ಬೇಸ್ತುಬೀಳಿಸುತ್ತಿದ್ದೆವು. ಆಶ್ಚರ್ಯದ ಸಂಗತಿಯೆಂದರೆ, ನಮ್ಮ ಪ್ರಶ್ನೆ ತಾತ್ತ್ವಿಕವಾಗಿದ್ದರೆ, ಅಥವಾ ಪ್ರಶ್ನೆಯಲ್ಲಿ ಯಾವುದಾದರೂ ತತ್ತ್ವಜಿಜ್ಞಾಸೆ ಇದ್ದರೆ ಅವರು ಎಂದಿಗೂ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಆದರೆ ಎಲ್ಲಾದರೂ ಪ್ರದರ್ಶನಕ್ಕಾಗಿ, ಅಥವಾ ಪ್ರಶ್ನೆ ಕೇಳುವುದಕ್ಕಾಗಿಯೇ ಪ್ರಶ್ನೆ ಕೇಳಿದರೆ ಅವರು ಹೇಳುತ್ತಿದ್ದರು: ''ನೋಡು, ಅತಿಯಾಗಿ ಪ್ರಶ್ನಿಸಬೇಡ. ತತ್ತ್ವದಲ್ಲಿ ಮನಸ್ಸನ್ನಿಟ್ಟು ಪ್ರಶ್ನೆ ಕೇಳು. ಯಾವ ತತ್ತ್ವವನ್ನು ತಿಳಿಯಬೇಕೆಂದಿದ್ದೀಯೋ ಅದರ ಬಗ್ಗೆ ಮಾತ್ರ ಪ್ರಶ್ನೆ ಕೇಳು.'' ಆಗ ನಾವು ಬೃಹದಾರಣ್ಯಕೋಪನಿಷತ್ತಿನಲ್ಲಿ ಬರುವ 'ಅಹಂ ಬ್ರಹ್ಮಾಸ್ಮಿ' ಎಂಬ ವಿಚಾರವನ್ನು ಕುರಿತು ಓದುತ್ತಿದ್ದೆವು. ಓದುತ್ತಿದ್ದಂತೆ ಬಿರುಸಿನ ವಾದವಿವಾದ ನಡೆಯುತ್ತಿತ್ತು. ಸ್ವಾಮಿ ಅಪರ್ಣಾನಂದರು (ಸತ್ಯ ಮಹಾರಾಜ್) ಆಗ ಆಲ್ಮೋರಾ ಆಶ್ರಮದ ಅಧ್ಯಕ್ಷರಾಗಿದ್ದರು. ಎಲ್ಲವನ್ನೂ ಕೇಳಿಸಿಕೊಂಡ ಅವರು ನಮ್ಮನ್ನು ಚೆನ್ನಾಗಿ ಬೈದು, ''ನೀವೆಲ್ಲಾ ಏನು ಮಾಡುತ್ತಿದ್ದೀರೋ!'' ಎನ್ನುತ್ತಿದ್ದರು. ಆದರೆ ಜಗದಾನಂದಜಿ ಮಹಾರಾಜ್, ''ನೀವು ಸತ್ಯನ (ಸತ್ಯ ಮಹಾರಾಜರ) ಮಾತಿಗೆ ಗಮನ ಕೊಡಬೇಡಿ'' ಎನ್ನುತ್ತಿದ್ದರು. ಇರಲಿ, ಒಂದು ದಿನ ಒಬ್ಬ ಹೇಳಿದ, ''ಮಹಾರಾಜ್, ಇದು ಏನೆಂದು ಅರ್ಥವಾಗಲಿಲ್ಲ.'' ಅದಕ್ಕೆ ಅವರು ತುಸು ನಿಧಾನವಾಗಿ ಹೇಳಿದರು: ''ಮೊದಲು ನಮ್ಮನ್ನು ನಾವು ತಯಾರು ಮಾಡಿಕೊಳ್ಳಬೇಕು, ಹೀಗೆ ಅದರ ಅನುಭವವಾಗುವುದು. ನನಗೆ ಅದು ಲಭಿಸಿದೆ, ಆದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ಮಾತಿನಲ್ಲಿ ನಿಮಗೆ ನಂಬಿಕೆಯಿದ್ದರೆ ಆಗ ನಿಮಗೂ ಒಳ್ಳೆಯದಾಗುವುದು; ನಿಮಗೆ ನಂಬಿಕೆಯುಂಟಾಗದಿದ್ದರೆ, ನಾನು ಬೇರೇನೂ ಮಾಡಲಾರೆ.''



ಸ್ವಾಮಿ ಜಗದಾನಂದರು

ಮಹಾರಾಜರು ಸಾಯಂಕಾಲದ ಹೊತ್ತು ನಮ್ಮನ್ನೆಲ್ಲ ಕರೆದುಕೊಂಡು ಗುಂಪಾಗಿ ತಿರುಗಾಡಲು ಹೋಗುತ್ತಿದ್ದರು. ಅವರಿಗೆ ರಕ್ತದೊತ್ತಡ (High Blood Pressure) ತುಂಬಾ ಇತ್ತು. ಆಗ ಅವರಿಗೆ ೭೦ ಕ್ಕೂ ಹೆಚ್ಚಿನ ವಯಸ್ಸು. ಬೆಟ್ಟದಲ್ಲಿ ಏರಿಳಿಯುತ್ತ ನಡೆಯುತ್ತಿದ್ದುದರಿಂದ ಅವರಿಗೆ ಹಲವು ಬಾರಿ ಶ್ವಾಸ ನಿಂತುಬಿಡುತ್ತಿತ್ತು. ಒಂದು ದಿನ ಅವರಿಗೆ ಅತಿಯಾಗಿ ಶ್ವಾಸ ಕಟ್ಟಿತು. ನಮಗೆಲ್ಲ ಬಹಳ ಗಲಿಬಿಲಿಯುಂಟಾಯಿತು. ರಸ್ತೆಯ ನಡುವೆ ನಾವೆಲ್ಲ ಅವರ ಸುತ್ತ ಮುತ್ತಿಕೊಂಡು ನಿಂತಿದ್ದೆವು. ಸ್ವಾಮಿ ಆತ್ಮಸ್ಥಾನಂದಜಿ ನಮ್ಮ ನಾಯಕರಾಗಿದ್ದರು. ಅವರು ಮಹಾರಾಜರಿಗೆ, ''ಮಹಾರಾಜ್, ನಿಮ್ಮ ಶರೀರಕ್ಕೆ ಇಂಥ ಅವಸ್ಥೆ ಉಂಟಾದದ್ದು ನೋಡಿ ನಮಗೆಲ್ಲ ಬಹಳ ಚಿಂತೆಯಾಗುತ್ತಿದೆ'' ಎಂದರು.